ಅಂತ ಅಜಮಾಸಿನ ಮ್ಯಾಲೇ ಒಂದ್ ಮಾತು ಒಗದಾಳ. ಹರೇದ್ ಹುಡುಗೀಗೆ ಇದು ಕುತಗೀಗೇ ಬಂದಗಾಗೇತಿ.

ಏನೇನೋ ಸಬೂಬು ಹೇಳಿ ಮುಂದಕ್ಕ ಹೋಗೂದ್ರಾಗs, ಹಿರೇದಾಕಿ ಮತ್ತ ಹಳೇ ವಿಷಯಾನ ಕೆದಕಿ, ‘ಹಂಗಂದ್ರ ಹೆಂಗs ತಂಗೀ? ನೀ ಏನೋ ಮುಚ್ಚಿಟ್ಟು, ಸುಳ್ಳ ಹೇಳಾಕತ್ತೀ ಅನಸ್ತೈತಿ’ ಅಂತ ಪೀಡಿಸಿ ಕೇಳಾಕತ್ಲಂತ. ಅಷ್ಟಕ್ಕ ಬಿಡಲಾರ್ದ ‘ಅಲ್ಲಬೇ, ಈಗಿನ್ ಹುಡಗ್ಯಾರು ಮದವ್ಯಾಗಿ ಮೂರ್ ತಿಂಗಳ್ದೊಳಗ ಮಾಂವಿನ ಕಾಯಿ, ಹುಣಸೀ ಕಾಯಿ, ಎರೀ ಮಣ್ಣು ತಿನ್ನಾಕ್ ಸೂರೂ ಮಾಡ್ತಾರ. ಹುಡಗೂರರs ಏನ್ ಕಮ್ಮಿ? ಸುಮ್ನ ಇರವ್ರಂತೀಯಾ? ಆದಷ್ಟ್ ಲಗೂನs ತಮ್ಮ ಗಂಡ್ತಸ್ತನಾ ತೋರ್ಸೇ ತೀರೂ ಹುರಪು ಅವರ್ದು. ಹಿಂಗಿರೂವಾಗ ನೀ ಹೇಳಿದ್ದು ಖರೇ ಅಂತ ಹೆಂಗ್ ನಂಬೂದs ತಂಗೀ?’ ಅಂತ ಮತ್ತ ಪಾಟೀ ಸವಾಲಿನ ಪ್ರಶ್ನೆ ಒಗದ್ಲಂತ. ಪಾಪ ಹರೇದಕಿಗೆ ಇದು ನುಂಗಲಾರದ ತುತ್ತs ಆಗೇತಿ. ‘ಖರೇ ಹೇಳಿದ್ರ ತಂದs ಮಾನಾಮರ್ಯಾದೆ ಹೊಕ್ಕೈತಿ, ಹೇಳದಿದ್ರ ಆಕಿ ಬಿಡಾಕೆಲ್ಲ! ಏನ್ ಮಾಡೂದೀಗ?’ ಅಂತ ಯೋಚ್ನೇ ಮಾಡೊಂತ ‘ಇಲ್ಲ ಬಿಡಬೇ ಈಗರ ಏನ್ ಅಂವಸ್ರಾ, ದೇವರು ಕಣ್ಣ ತಗದಾಗ ಆಗೇ ಅಕ್ಕಾವು’ ಅಂತ ಮತ್ತ್ ಹಾರಿಕೀ ಉತ್ರಾ ಕೊಡಾಕ್ ಹೋಗ್ಯಾಳ.

ಅದನ್ನೂ ನಂಬೂ ಗಿರಾಕಿ ಆಗರ್ಲಿಲ್ಲ ಹಿರೇದಕಿ. ‘ಅಲ್ಲಾ ತಂಗೀ, ಏನರ ದೋಸ ಇದ್ರ ಶ್ಯಾಣ್ಯಾರ ಹಂತೇಕರs ಹೋಗಿ ತೋರಸ್ಗೋ ಬೇಕಿಲ್ಲೋ? ದೋಸ ಏನರ ಇದ್ರೂ ನಿಂದs ಇರ್ಬೇಕು. ನಿನ್ನ ಗಂಡನ ಕಡೇಕ್ ದೋಸ ಇರಾಕ್ ಸಾಧ್ಯನs ಇಲ್ಲ. ಯಾಕಂದ್ರ ಅಂವನ್ನ ನೋಡಿದ್ರ ಕಡದ್ ಕುಂಟೀ ದಿಂಡ್ ಆಗ್ಯಾನ’. ಅಂತ ಅಗಾವ್ ಕಟ್ಟಿ ಮಾತ್ ಬಿಟ್ಲಂತ. ಈ ಮಾತು ಕೇಳಿದ ಹರೇದಕೀಗೆ ಒಳಗೊಳಗ ಹೊಟ್ಟೀ ಉರ್ಯಾಕ್ ಸೂರುವಾಗೇತಿ. ‘ಕಡದ್ ಕುಂಟೀ ದಿಂಡಂತ! ಕಡದ್ ಒಗೀಬೇಕು ಇಂವನ ದಿಂಡ್’ ಅಂತ ಮನಸಿನ್ಯಾಗ ಅನಕೊಂತ ಸುಮ್ನ ಹೋಟ್ಲಂತ.

ಆದ್ರ, ಆ ಹಿರೇದಕಿ ಬಾಳ್ ಜಾಬಾ ಇದ್ಳು, ಹರೇದ್ ಹೆಣ್ಮಗ್ಳು ಹೆಂಗರ ಅಕೀ ಕೈಯಿಂದ ಪಾರಾಗ್ಬೇಕಂತ ನೋಡಿದ್ರ, ಇಕೀ ಬಿಡsವೊಳ್ಳು. ಮತ್ತ ಮತ್ತ ಕೆದಕಿ ಕೆದಕಿ, ‘ಅಲ್ಲ ಯವ್ವಾ, ನಿನ್ನ ಗಂಡನ್ನ ನೋಡಿದ್ರ ದೊಡ್ಡ ಪೈಲ್ವಾನ! ಎಂಟೆತ್ತ ಕಟ್ಟಿ ಹೊಡಿಯೋ ರೂಲುಗಲ್ ಆಗ್ಯಾನ. ಹಂತಾಂವಾ ಇನ್ನೂ ಏನೂ ಮಾಡಿಲ್ಲಂದ್ರ ಹೆಂಗs ತಂಗೀ?’ ಅಂತ ಮತ್ತಷ್ಟು ಚುಚ್ಚೂ ಮಾತು ಆಡಿದ್ದಾಳೆ. ಅಷ್ಟಕ್ಕೂ ಬಿಡದೇ, ‘ಅಲ್ಲ ತಂಗೀ ಮತ್ತ, ಹಾಸಿಗ್ಯಾಗ ಹೆಂಗ್ ನಿನ ಗಂಡ? ಅಲ್ಲಿ ಚೊಲೋ ಇದ್ದಿದ್ರ...’ ಅಂತ ತನ್ನ ಮಾತು ಅರ್ಧಕ್ಕ ನಿಲ್ಲಿಸಿ ಅಕೀ ಮರ್ಮಕ್ಕs ಚುಚ್ಚಿ ಬಿಟ್ಟಾಳ!

ಈ ಮಾತು ಕೇಳಿದ್ ಕೂಡ್ಲೇ ಹರೇದ್ ಹಣ್ಮಗಳ ಪಿತ್ತ ನೆತ್ತಿಗೇ ಏರಿ ಬಿಟ್ತೆಂತ. ಅಕೀ ಹೊಟ್ಟ್ಯಾಗಿನ ಸಿಟ್ಟು ಬಾಯ್ಗೇ ಬಂದು ‘ಹೂಂ, ಹಾಸ್ಗ್ಯಾಗ ಬಾಳ್ ಸೂರ ಅದಾನಂವಾ ಯಕ್ಕಾ ನನ ಗಂಡಾ, ಅದಕ್ಕ ನನ್ನ ಗಲ್ಲ ಹಿಂಗ್ ಆಗಿರೂದು. ನೋಡಿಲ್ಲೆ ಹೆಂಗ್ ಕಡದಾನ. ಅಂವಾ ಗಂಡ್ಸ್ ಆಗಿದ್ರ ಹಿಂಗ್ಯಾಕ್ ಆಕ್ಕಿತ್ತು ನನ್ನ ಹಣೇಬರಾ. ಕೀಸೀಲಿಲ್ಲ ಮಸೀಲಿಲ್ಲ, ಕುಸೀಲೇ ಗಲ್ಲಾ ಕಡದ್ ಹಿಂಗ್ ಮಾಡ್ಯಾನ ನೋಡ್! ಅಂವಾ ಖರೇ ಗಂಡ್ಸs ಆಗಿದ್ರ ಬರೇ ಗಲ್ಲಾ ಕಡೀತಿದ್ನs? ಮಾಡಬೇಕಾಗಿದ್ದನ್ನ ಮಾಡ್ತಿದ್ದ. ಅವೆಂತಾ ಗಂಡ್ಸs ಯವ್ವಾ? ನನ್ನ ಹಣೇಬರಾನs ಕೆಟ್ಟೈತಿ’... ಅನ್ನೋತನs ಅಷ್ಟೊತ್ತನಕ ಮುಚ್ಕೊಂಡಿದ್ದ ತನ್ನ ಗಲ್ಲದ ಮ್ಯಾಲಿನ ಕೈ ತಗದ್ ತೋರಿಸಿ ಬಿಟ್ಟಾಳ ಹಿರೇದಕಿಗೆ! ಅದನ್ನ ನೋಡಿದ ಆ ಹೆಣ್ಮಗ್ಳು, ಬಾಯ್ ಮ್ಯಾಲ್ ಕೈ ಇಟಗೊಂಡು, ‘ಅಯ್ಯ ನನ ಸಿವನ, ಇದಾs ನಿನ್ನ ಗಂಡ್ ಮಾಡಿದ್ ಸೂರತನಾ? ಬೇಸ್ಯಾತ್ ಬಿಡು. ನೀ ಹೇಳ್ದೆಂಗ್ ಅಂವಾ ಕಿಸೀಲಿಲ್ಲ ಮಸೀಲಿಲ್ಲ ಕುಸೀಲೇ ಗಲ್ಲಾ ಕಡದು ಹಾಳ ಮಾಡ್ಯಾನ ಮೂಳಾ! ಹೀಂಗಿದ್ರ ಮಕ್ಳು ಹೆಂಗಾಕ್ಕಾವ ಯವ್ವಾ ನಿನಗ? ಛೇ ಬಾಳ ಕೆಟ್ಟ ಐತೆವ್ವಾ ನಿನ್ನ ನಸೀಬಾ, ನಡೀ ನಡೀ, ನೀರ ತುಂಬೂನು’ ಅನ್ನೋತs ಬಾಂವಿಯೊಳಗ ಇಳಿದಿದ್ರಂತ.

ಇಷ್ಟೆಲ್ಲಾ ಆದ ಮ್ಯಾಲ ಆ ಹಿರೇ ಹೆಣ್ಮಗ್ಳ ಬಾಯಿ ಸುಮ್ನ ಇದ್ದೀತs? ಮದ್ಲs ಅಕೀದು ಹರಕ್ ಬಾಯಿ. ಹೋದ್ ಹೋದಲ್ಲೆಲ್ಲ ಆ ಹರೇದ ಹುಡುಗಿ ಕಥೀ ಹೇಳ್ಕೊಂತ, ‘ಅಯ್ಯ ಅಕೀಗೆ ಇನ್ನೂ ಯಾಕ ಮಕ್ಳು ಆಗಿಲ್ಲ ಗೊತ್ತೈತೆನು? ಅಕೀ ಗಂಡ ‘ಕಿಸೀಲಿಲ್ಲ ಮಸೀಲಿಲ್ಲ ಕುಸೀಲೇ ಗಲ್ಲ ಹಾಳಾಗಿತ್ತಂತ ಅನ್ನೂವಂಗ್ ಮಾಡ್ಯಾನ ಭಾಡ್ಕೋ’ ಅಂತ ಎಲ್ಲಾ ಕಡೆ ಡೊಂಗ್ರಾ ಸರ್ಕೊಂತ ಹೊಂಟ್ಲಂತ. ಹಂಗ್ ಹೇಳೂವಾಗನs ಅಕೀ ಬಾಯಾಗಿನ ‘ಕುಸೀಲೇ ಗಲ್ಲ ಹಾಳಾಗಿತ್ತಂತ’ ಅನ್ನೋ ಮಾತು ಒಬ್ಬರಿಂದ ಮತ್ತೊಬ್ಬರಿಗೆ ಸಾಗೂವಾಗ ‘ಕುಸೂಗಲ್ ಹಾಳಾಗಿತ್ತಂತ’ ಅಂತ ರೂಪಾಂತರ ಹೊಂದಿ, ಅದ ಮಾತು ಗಾದೀ ಮಾತಾಗಿ ಇವತ್ತಿಗೂ ಜನರ್ ಬಾಯಾಗ ಹರದಾಡಾಕ್ಹತ್ತೈತಿ. ತಿಳೀತಾ ಸಾದರ ಅವ್ರೆ? ಇದು ಈ ಗಾದೆ ಮಾತಿನ ಹಿಂದೆ ಇದ್ದ ಖರೇ ಅರ್ಥ’ ಅಂತ ಒಂದ್ ದೊಡ್ಡ ಸಂಶೋಧನಾದ ಕಥೀ ಮುಗಿಸಿದ್ರು ಪಾಟೀಲ ಪುಟ್ಟಪ್ಪನವ್ರು. ಭಾರೀ ಕಿಲಾಡಿ ಮನಶ್ಯಾ!

ಕಥೀ ಕೇಳಿ ನಾನು ದಂಗ್ ಆಗಿ ಹೋಗಿದ್ಯಾ. ಪಾಪ ಆ ಹರೇದ ಹೆಣ್ಮಗಳ ಸಂಕ್ಟದ ‘ಕಿಸೀಲಿಲ್ಲ ಮಸೀಲಿಲ್ಲ, ಕುಸೀಲೇ ಗಲ್ಲ ಹಾಳಾಗಿತ್ತಂತ’ ಅನ್ನೂ ಮಾತು, ಹಿರೇ ಹೆಣ್ಮಗಳ ಬಾಯಾಗ ಬ್ಯಾರೇ ರೀತೀನ ಆಗಿ, ಅಲ್ಲಿಂದ ಅದು ಮಂದೀ ಬಾಯಿಂದ ಬಾಯೀಗೆ ಹರದಾಡೂ ಗಾದೀ ಮಾತಾಗಿ, ‘ಕಿಸೀಲಿಲ್ಲ ಮಸೀಲಿಲ್ಲ, ಕುಸೂಗಲ್ಲ ಹಾಳಾಗಿತ್ತಂತ’ ಅಂತ ಎಲ್ಲಾ ಕಡೆ ಹಂಗ್ ಉಳದ್ ಬಿಟ್ಟೈತಿ! ಏನ್ ಕತೀ, ಏನ್ ಮಾತು ನೋಡ್ರಿ! ಅಂತ ಆ ಕತೀ ಮುಗಿಸೂದ್ರಾಗs ಬಾಬಾ ಸಾಹೇಬನ ನರಗುಂದದ ಅಗಸೀ ಬಾಗ್ಲಾ ಬಂದಿತ್ತು.

ನಮ್ಮ ಗಾದೆ ಮಾತುಗಳು ಜೀವನಾನುಭವದ ಪಾಕಗಳೂ ಅಂತಾರ. ಖರೇ ಐತಿ. ಆದ್ರ ಹಂತಾ ಅನುಭವದ ಮಾತುಗಳು ಮಂದೀ ಬಾಯಾಗ ಸಂವಕಳಿ ಆಕ್ಕೊಂತ್, ಒಂದ್ ಅರ್ಥ ಹೋಗಿ ಇನ್ನೊಂದ ಆರ್ಥಾ ಹಚಗೊಂಡು ಮೂಲ ಅರ್ಥಾನ ಕಳಕೊಂಡರ್ತಾವ. ಅವುಗಳ ಮೂಲ ಅರ್ಥಾ ಹುಡುಕಿದ್ರ, ಅವು ಹೆಂಗ್ ಹುಟ್ಟಿದ್ವು ಅನ್ನೂದು ಪುಟ್ಟಪೂರ ತಿಳೀತೈತಿ. ಹಂತಾ ಅರ್ಥಾನ ಪುಟ್ಟಪ್ಪನವರಂಥಾ ಅನುಭವಿಗಳs ಬಿಡಿಸಿ ತೋರಿಸ್ಬೇಕು. ಆದರ ಈಗ ಹಂತಾ ಅನುಭವಿಕ್ರು ಅದಾರಂತೀರಾ? ■

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ ‘ಚೆನ್ನುಡಿ’ ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್–
**editorsu@sudha.co.in**



ಧಾರವಾಡ ತಾಲ್ಲೂಕಿನ ಕರಡಿಗುಡ್ಡ ಗ್ರಾಮದ ಮಲ್ಲಿಕಾರ್ಜುನ (ಗುಡ್ಡದ ಮಲ್ಲಯ್ಯ) ದೇವಸ್ಥಾನ ಬಳಿ ಸೂರ್ಯಾಸ್ತದ ಸೊಬಗು

ಚಿತ್ರಗಳು: ಬಿ.ಎಂ.ಕೇದಾರನಾಥ